# ವಚನ ಚಳುವಳಿಕಾರರ ದಾಸೋಹದ ಮಹತ್ವ

**ಡಾ. ಜಿ. ರವಿ, ಕನ್ನಡ ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೃಷ್ಣರಾಜಪುರ ಬೆಂಗಳೂರು.**

## ಪೀಠಿಕೆ

ಶರಣರ ಸಾಮಾಜಿಕ ಸಿದ್ಧಾಂತಗಳಲ್ಲಿ ಕಾಯಕದಂತೆ ದಾಸೋಹವೂ ಒಂದು ಮಹತ್ವದ ಮೌಲ್ಯ. ಕಾಯಕ ಮತ್ತು ದಾಸೋಹ ಒಂದೇ ನಾಣ್ಯದ ಎರಡು ಮುಖಗಳಂತೆ ಒಂದಕ್ಕೊಂದು ಪೂರಕವಾಗಿವೆ. ಕಾಯಕಕ್ಕೆ ಹೇಗೆ ನಿಯಮಗಳಿವೆಯೋ ದಾಸೋಹಕ್ಕೂ ನಿಯಮಗಳಿವೆ. ಮೋಸಮಾಡಿ, ಕಳವುಮಾಡಿ ತಂದ ಧನವನ್ನು ದಾಸೋಹಕ್ಕೆ ಸ್ವೀಕರಿಸುವುದಿಲ್ಲ. ಶ್ರಮಪಟ್ಟು ದುಡಿದು, ಸದಾಚಾರದಿಂದ ಗಳಿಸಿ, ಅಹಂಕಾರ ತೊರೆದು ಸಮರ್ಪಣಾಭಾವದಿಂದ ಅರ್ಪಿಸಿದಾಗ ಮಾತ್ರ ಅಂತಹ ಧನ ದಾಸೋಹಕ್ಕೆ ವಿನಿಯೋಗವಾಗುತ್ತದೆ. ಅಲ್ಲಮಪ್ರಭು ದಾಸೋಹದ ವ್ಯಾಖ್ಯೆಯನ್ನು ಸೊಗಸಾಗಿ ಹೇಳಿದ್ದಾರೆ. "ಸೋಹಂ-ಎಂಬುದಕ್ಕೆ ದಾಸೋಹವ ಮಾಡದಿರ್ದಡೆ ಅತಿಗಳೆವೆ ನೋಡಾ ಗುಹೇಶ್ವರಾ (ವ:75)" ಎಂದು ಹೇಳಿದ್ದಾರೆ. ಇದೇ ವಿಷಯದ ಬಗೆಗೆ ಸಿದ್ಧರಾಮಯ್ಯ ತಮ್ಮ ವಚನವೊಂದರಲ್ಲಿ ದಾಸೋಹದ ವ್ಯಾಖ್ಯೆಯನ್ನು ಇನ್ನೂ ಸ್ಪಷ್ಟಪಡಿಸಿದ್ದಾರೆ: ಸೋಹಂ-ಎಂಬುದು ಅಂತರಂಗದ ಮದ ಮತ್ತು `ಶಿವೋಹಂ' ಎಂಬುದು ಬಹಿರಂಗದ ಮದ. "ಈ ದ್ವಂದ್ವವನಳಿದು ದಾಸೋಹಂ ಎಂದೆನಿಸಯ್ಯಾ" ಎಂದು ಕಪಿಲಸಿದ್ಧಮಲ್ಲಿಕಾರ್ಜುನನಲ್ಲಿ ಕೇಳಿಕೊಂಡಿದ್ದಾರೆ.

ತನು-ಮನ-ಧನಗಳನ್ನರ್ಪಿಸಿ, ಮಾಡುವ ದಾಸೋಹವು ಒಂದು ಮೌಲ್ಯವಾಗಿ ಬೆಳೆದಿದೆ. ತನುವನರ್ಪಿಸಿ ಮಾಡುವ ದಾಸೋಹವು ಸಂಪೂರ್ಣವಾಗಿರುತ್ತದೆ, ಅದೇ ನಿಜವಾದ ಮುಕ್ತಿಯೆಂದು ಉರಿಲಿಂಗಪೆದ್ದಿ ಹೇಳಿದ್ದಾರೆ. ಮನವನರ್ಪಿಸಿ ಮಾಡುವ ದಾಸೋಹವು ಮತ್ತು ಧನವನರ್ಪಿಸಿ ಮಾಡುವ ದಾಸೋಹವು ಸಂಪೂರ್ಣವಾಗಿರುತ್ತದೆ, ಅದೇ ನಿಜವಾದ ಭಕ್ತಿಯಾಗಿರುತ್ತದೆ, ಅದೇ ಮುಕ್ತಿಗೆ ದಾರಿಯಾಗುತ್ತದೆಂದು ಶರಣರು ಹೇಳಿದ್ದಾರೆ. ಅಂಗದ ಮೇಲೆ ಲಿಂಗವಿದ್ದಾಗ ಸಾಲೋಕ್ಯಮುಕ್ತಿಯ ಅಗತ್ಯವಿಲ್ಲ, ಗುರುಲಿಂಗಜಂಗಮದ ದಾಸೋಹದಲ್ಲಿದ್ದಾಗ ಸಾಮೀಪ್ಯ ಮುಕ್ತಿಯ ಅಗತ್ಯವಿಲ್ಲವೆಂದು ಉರಿಲಿಂಗಪೆದ್ದಿ ತಿಳಿಸಿದ್ದಾರೆ. ಶರಣರು ಕಾಯಕವನ್ನೇ ಕೈಲಾಸವೆಂದು ಭಾವಿಸಿದರು. ದಾಸೋಹವನ್ನೇ ಮುಕ್ತಿಯೆಂದು ತಿಳಿದರು. ಹೀಗಾಗಿ ಕಾಯಕವೇ ಕೈಲಾಸವಾಯಿತು. ದಾಸೋಹವೇ ಮುಕ್ತಿಯಾಯಿತು.

ಆಯುಷ್ಯವೇ-ಲಿಂಗ, ಶ್ರೀಯೇ-ಜಂಗಮ, ನಿಧಾನವೇ-ಸುಜ್ಞಾನ, ವಿದ್ಯೆಯೇ -ಶಿವಮಂತ್ರ ಮತ್ತು ದೇಹವೇ-ದಾಸೋಹವೆಂದು ಅಜಗಣ್ಣತಂದೆ ಹೇಳಿದ್ದಾರೆ. ಎಲ್ಲಾ ತನ್ನೊಳಗೇ ಇದೆ, ಸಾಧನೆಯಿಂದ ಅದು ಪ್ರಕಟವಾಗುತ್ತದೆಂದವರು ತಿಳಿಸಿದ್ದಾರೆ. ಒಮ್ಮನದಿಂದ, ಭಕ್ತಿಯಿಂದ ಮಾಡುವುದು ಮಾತ್ರ ದಾಸೋಹವಾಗುತ್ತದೆಂದು ಶರಣರು ಹೇಳಿದ್ದಾರೆ. ತನು-ಮನ ಕರಗದೆ, ಕಾಯವ ಬಳಲಿಸದೆ, ಕಾಯಕವ ಮಾಡದೆ ಕಾಡಿಬೇಡಿ ಮಾಡುವುದು ದಾಸೋಹ ಹೇಗಾಗುತ್ತದೆಂದು ಶಿವಲೆಂಕ ಮಂಚಣ್ಣನವರು ಕೇಳಿದ್ದಾರೆ.

ದಾಸೋಹವೆಂಬುದು ಸರಳವಾದದ್ದಲ್ಲ. ಕೇವಲ ಧನವ ನೀಡುವುದು ದಾಸೋಹವಲ್ಲ, ಸಂಪತ್ತು ಹಂಚುವುದು ದಾಸೋಹವಲ್ಲ. ದಾಸೋಹವೆಂಬುದು ಅಂತರಂಗದ ಭಕ್ತಿಸಾಧ್ಯತೆ, ಅದು ತನು-ಮನ-ಧನದ ಸಮರ್ಪಣೆ. ತನ್ನನ್ನೇ ತಾನು ಸಮುದಾಯಕ್ಕೆ ಸಮಾಜಕ್ಕೆ ಅರ್ಪಿಸಿಕೊಳ್ಳುವುದೇ ನಿಜವಾದ ದಾಸೋಹವೆಂದು ಶರಣರು ಹೇಳಿದ್ದಾರೆ.

ಕಾಯಕದಲ್ಲಿ ಅನೇಕ ಕಾಯಗಳಿರುವಂತೆ ದಾಸೋಹದಲ್ಲಿಯೂ ಅನೇಕ ರೀತಿಯ ದಾಸೋಹಗಳಿವೆ. ತನು-ಮನ-ಧನವನು, ಗುರು-ಲಿಂಗ-ಜಂಗಮರಿಗೆ ಅರ್ಪಿಸಿ ಮಾಡುವ ತ್ರಿವಿಧ ದಾಸೋಹದ ಬಗೆಗೆ ಶರಣರು ವಿವರವಾಗಿ ಹೇಳಿದ್ದಾರೆ. ಇದರೊಂದಿಗೆ ಅನ್ನದಾಸೋಹ ಮತ್ತು ಜ್ಞಾನದಾಸೋಹದಂತಹ ಮಹತ್ವದ ದಾಸೋಹಗಳಿವೆ. ದಾಸೋಹವೆಂದರೆ, ಅನ್ನದಾಸೋಹ ಮಾತ್ರವಲ್ಲ. ಬಸವಣ್ಣನವರು ತಮ್ಮ ವಚನಗಳಲ್ಲಿ ವಿವಿಧ ದಾಸೋಹಗಳ ಪರಿಚಯ ನೀಡಿದ್ದಾರೆ. ಭಕ್ತಶ್ರೇಷ್ಠನಾದವನು ಭಕ್ತಿದಾಸೋಹ ಮಾಡಬಹುದು, ಯುಕ್ತನಾದವನು ಯುಕ್ತಿ ದಾಸೋಹವ ಮಾಡಬಹುದು. ಐಕ್ಯಸ್ಥಲವ ಸಾಧಿಸಿದವನು ಮಮಕಾರ ದಾಸೋಹವ ಮಾಡಬಹುದು. ಎಲ್ಲ ವಿಷಯದಲ್ಲಿಯೂ ದಾಸೋಹವಿದೆಯೆಂದು ವಿವರಿಸಿದ್ದಾರೆ.

**ತ್ರಿವಿಧ ದಾಸೋಹ**

ತನು-ಮನ-ಧನಗಳನ್ನು ಗುರು-ಲಿಂಗ-ಜಂಗಮಕ್ಕೆ ಅರ್ಪಿಸಬೇಕೆಂಬುದು ಶರಣರ ತ್ರಿವಿಧ ದಾಸೋಹದ ಸಿದ್ಧಾಂತ. ತನು-ಮನ-ಧನಗಳನ್ನು ಕ್ರಮವಾಗಿ ಗುರು-ಲಿಂಗ-ಜಂಗಮಕ್ಕರ್ಪಿಸಬೇಕೆಂಬುದು ತ್ರಿವಿಧ ದಾಸೋಹದ ಮೊದಲ ಹಂತ. ಆದರೆ ಇಲ್ಲಿ ಗುರು-ಲಿಂಗ-ಜಂಗಮರೆಂದರೆ ಯಾರು? ಎಂದು ಪ್ರಶ್ನಿಸಿಕೊಂಡಾಗ ಶರಣರ ವಚನಗಳಲ್ಲಿಯೇ ಉತ್ತರಗಳಿವೆ. ಅರಿವೇ ಗುರು, ಆಚಾರವೇ ಲಿಂಗ ಮತ್ತು ಅನುಭಾವವೇ ಜಂಗಮ. ಮೂರ್ತರೂಪದ ಗುರು ಒಂದು ಕಡೆಯಿದ್ದರೆ ಅಮೂರ್ತರೂಪದ ಅರಿವು ಮತ್ತೊಂದು ಕಡೆಯಿದೆ. ಮೂರ್ತರೂಪದ ಇಷ್ಟಲಿಂಗ ಕಾಣಿಸಿದರೆ, ಅಮೂರ್ತರೂಪದ ಆಚಾರಲಿಂಗ ಕಾಣಿಸುವುದಿಲ್ಲ. ಅದೇ ರೀತಿ ಕಾವಿಧಾರಿ ಜಂಗಮ ಕಾಣಿಸಿಕೊಂಡರೆ, ಒಳಗಿರುವ ಅನುಭಾವದ ಜಂಗಮ ಕಾಣಿಸಿಕೊಳ್ಳುವುದಿಲ್ಲ. ಶರಣರು ಈ ದಾಸೋಹ ತತ್ವದ ಮೂಲಕ ಬದುಕಿನ ಗೂಢಾರ್ಥವನ್ನು ಬಿಚ್ಚಿಟ್ಟಿದ್ದಾರೆ. ಗುರು-ಲಿಂಗ-ಜಂಗಮಕ್ಕೆ ತನು-ಮನ-ಧನ ಸಮರ್ಪಿಸುವುದೆಂದರೆ ಅನೇಕ ಅರ್ಥಗಳಿವೆ. ಅರಿವೇ ಗುರುವಾಗುವುದು, ಆಚಾರವೇ ಲಿಂಗವಾಗುವುದು, ಅನುಭಾವವೇ ಜಂಗಮವಾಗುವುದು ನಿಜವಾದ ದಾಸೋಹವಾಗುತ್ತದೆ.

"ಅಂಗದ ಲಿಂಗವೇ ಮನದ ಲಿಂಗ, ಮನದ ಲಿಂಗವೇ ಭಾವದ ಲಿಂಗ, ಭಾವದ ಲಿಂಗವೇ ಜಂಗಮ ದಾಸೋಹ (ವ:707)" ಎಂದು ಹೇಳಿರುವ ಅಲ್ಲಮಪ್ರಭುಗಳ ಈ ವಚನದಲ್ಲಿ ದಾಸೋಹದ ನಿಜವಾದ ಅರ್ಥ ಕಾಣಿಸುತ್ತದೆ. ದಾಸೋಹವೆಂಬುದು ನಿರಂತರ ಸತ್ಯ. ಇಲ್ಲಿ ಕೇವಲ ಕೊಡುವುದು-ಪಡೆಯುವುದು ಮುಖ್ಯವಾಗುವುದಿಲ್ಲ. ತಿಳಿಯುವುದು-ಹೊಳೆಯುವುದು ಮುಖ್ಯವಾಗುತ್ತದೆ. ಅಂಗದಲ್ಲಿ ಅಳವಟ್ಟಿರುವ ಆಚಾರವನ್ನೇ ಲಿಂಗವೆಂದರಿತಾಗ ಒಳಗಡೆ ಬೆಳಗುತ್ತಿರುವ ಅನುಭಾವವೇ ಜಂಗಮವಾಗುತ್ತದೆ. ಇಂತಹ ಅರಿವಿನ ಅಗಾಧತೆಯೇ ನಿಜವಾದ ತ್ರಿವಿಧ ದಾಸೋಹ.

ತನುವ ಗೆಲಲರಿಯದೆ, ಮನವ ಗೆಲಲರಿಯದೆ
ಧನವ ಗೆಲಲರಿಯದೆ, ಭ್ರಮೆಗೊಂಡಿತ್ತು ಲೋಕವೆಲ್ಲವು.
ತನುವ ದಾಸೋಹಕ್ಕೆ ಸವೆಸಿ, ಮನವ ಲಿಂಗಧ್ಯಾನದಲ್ಲಿ ಸವೆಸಿ

ಧನವ ಜಂಗಮದಲ್ಲಿ ಸವೆಸಿ ಗೆಲ್ಲಬಲ್ಲಡೆ,

ಸಂಗನಬಸವಣ್ಣನಲ್ಲದೆ ಮತ್ತಾರನೂ ಕಾಣೆ.

ಗುಹೇಶ್ವರಾ ನಿಮ್ಮ ಶರಣ ಸಂಗನಬಸವಣ್ಣಂಗೆ

ನಮೋ ನಮೋ ಎನುತಿರ್ದೆನು.

-ಅಲ್ಲಮಪ್ರಭು

ಈ ವಚನವು ದಾಸೋಹದ ಪರಿಕಲ್ಪನೆಯನ್ನು ಹೊಸರೀತಿಯಲ್ಲಿ ಕಟ್ಟಿಕೊಡುತ್ತದೆ. ವೈರಿಗಳನ್ನು ಗೆಲ್ಲಬಹುದು, ಸಾಮ್ರಾಜ್ಯವನ್ನು ಗೆಲ್ಲಬಹುದು. ಆದರೆ ತನು-ಮನ-ಧನಗಳನ್ನು ಗೆಲ್ಲುವುದು ಸುಲಭವಲ್ಲ. ಹೀಗೆ ಗೆದ್ದವರು ಬಸವಣ್ಣನವರು ಮಾತ್ರ, ಅವರಿಗೆ ನಮೋ ನಮೋ ಎಂದು ನಮಿಸಿದ್ದಾರೆ ಅಲ್ಲಮಪ್ರಭು. ದಾಸೋಹ ಮಾಡಲು ಧನವೇ ಬೇಕೆಂದೇನೂ ಇಲ್ಲ. ಸಮರ್ಪಣಾ ಭಾವದಿಂದ ತನುವನ್ನು ದಾಸೋಹಕ್ಕೆ ಸವೆಸುವುದು ಕೂಡಾ ನಿಜವಾದ ದಾಸೋಹವಾಗುತ್ತದೆ. ಅದೇರೀತಿ ಮನವನ್ನು ಲಿಂಗಧ್ಯಾನದಲ್ಲಿ, ಧನವನ್ನು ಜಂಗಮದಲ್ಲಿ ಸವೆಸುವುದು ದಾಸೋಹವಾಗುತ್ತದೆ.

ಚೆನ್ನಬಸವಣ್ಣನವರು ತಮ್ಮದೊಂದು ವಚನದಲ್ಲಿ ತ್ರಿವಿಧ ದಾಸೋಹಕ್ಕೆ ಸಂಬಂಧಿಸಿದಂತೆ, ತನು-ಮನ-ಧನದ ವಿಚಾರವನ್ನು ಪ್ರಸ್ತಾಪಿಸುತ್ತಾರೆ. ಆದರೆ ತನುವನ್ನು ಗುರುವಿಗರ್ಪಿಸಬೇಕೆಂದು ಹೇಳುವುದಿಲ್ಲ. ಬದಲಾಗಿ ಸದಾಚಾರಕ್ಕರ್ಪಿಸಬೇಕೆಂದು ಹೇಳಿದ್ದಾರೆ. ಧನವನ್ನು ಜಂಗಮಕ್ಕರ್ಪಿಸಬೇಕೆಂದು ಹೇಳಿಲ್ಲ. ಬದಲಾಗಿ ಶರಣರ ದಾಸೋಹಕ್ಕೆ ಸಲ್ಲಿಸಬೇಕೆಂದು ತಿಳಿಸಿದ್ದಾರೆ. ಹೀಗೆ ಮಾಡಿದರೆ ಭಕ್ತನ ತನು-ನಿರ್ಮಲವಾಗುತ್ತದೆ. ಮನ-ನಿಶ್ಚಿಂತವಾಗುತ್ತದೆ. ಮತ್ತು ಧನ-ನಿರ್ವಾಣವಾಗುತ್ತದೆಂದು ವಿವರಿಸಿದ್ದಾರೆ. ದಾಸೋಹಕ್ಕೆ ನೀಡುವಾಗ ಪೂರ್ಣಮನಸ್ಸಿನಿಂದ ನೀಡಬೇಕು. ದಾಸೋಹ ಮಾಡುವಾಗ ಸಮರ್ಪಣಾಭಾವದಿಂದ ಮಾಡಬೇಕೆಂದು ಶರಣರು ತಿಳಿಸಿದ್ದಾರೆ.

ದಾಸೋಹವೆಂದರೆ, ಅದು ತ್ರಿವಿಧ ದಾಸೋಹವೆಂದು ಹೇಳಿರುವ ಬಸವಣ್ಣನವರು ತನುವ ಕೊಟ್ಟು ಗುರುವನೊಲಿಸಬೇಕು, ಮನವ ಕೊಟ್ಟು ಲಿಂಗವನೊಲಿಸಬೇಕು, ಧನವ ಕೊಟ್ಟು ಜಂಗಮವನೊಲಿಸಬೇಕೆಂದು ತಿಳಿಸಿದ್ದಾರೆ. ತ್ರಿವಿಧ ದಾಸೋಹಕ್ಕೆ ದೇವರು ಒಲಿಯುತ್ತಾನೆಯೇ ಹೊರತು ಆಡುವುದರಿಂದ, ಹಾಡುವುದರಿಂದ, ಓದುವುದರಿಂದ ಒಲಿಯಲಾರ. ಆಡದೆ ನವಿಲು? ಹಾಡದೆ ತಂತಿ? ಓದದೆ ಗಿಳಿ? ಎಂದು ಕೇಳುತ್ತ ಭಕ್ತಿಯಿಲ್ಲದವರನೊಲ್ಲ ಕೂಡಲಸಂಗಮದೇವ ಎಂದು ಸ್ಪಷ್ಟಪಡಿಸಿದ್ದಾರೆ. ದಾಸೋಹದಿಂದ ಗುರು-ಲಿಂಗ-ಜಂಗಮರನ್ನು ಕಂಡೆನೆಂದು ಹೇಳಿದ್ದಾರೆ.

ಲಿಂಗಪೂಜೆ ಮತ್ತು ಜಂಗಮದಾಸೋಹಕ್ಕೆ ಪ್ರಾಮುಖ್ಯತೆ ನೀಡಿರುವ ಸಿದ್ದರಾಮ, ಬಸವಣ್ಣನವರ ದಾಸೋಹ ತತ್ವವನ್ನು ಕಂಡು ಕೊಂಡಾಡಿದ್ದಾರೆ. ಬಸವಣ್ಣನವರು ತನುವಿಡಿದು ದಾಸೋಹವ ಮಾಡಿ ಗುರುಪ್ರಸಾದಿಯಾದರು, ಮನವಿಡಿದು ದಾಸೋಹವ ಮಾಡಿ ಲಿಂಗ ಪ್ರಸಾದಿಯಾದರು, ಧನವಿಡಿದು ದಾಸೋಹವ ಮಾಡಿ ಜಂಗಮಪ್ರಸಾದಿಯಾದರು. ಈ ತ್ರಿವಿಧ ದಾಸೋಹದಿಂದ ಬಸವಣ್ಣನವರು ಸ್ವಯಂ ಪ್ರಸಾದಿಯಾದರೆಂದು ಹೇಳಿದ್ದಾರೆ. ಇದೇ ಮಾತನ್ನು ಸದ್ಗುರು ಚೆನ್ನಮಲ್ಲಿಕಾರ್ಜುನನೆಂಬ ವಚನಕಾರರು ಹೇಳಿದ್ದಾರೆ. ಚೆನ್ನಮಲ್ಲಿಕಾರ್ಜುನಯ್ಯಾ ಎಂಬ ಅಂಕಿತದಲ್ಲಿ ಇವರ ಎರಡು ವಚನಗಳಿವೆ. ಸಿದ್ದರಾಮ ಶಿವಯೋಗಿಗಳು ಹೇಳಿದ ವಿಚಾರವನ್ನೇ ಇವರೂ ಹೇಳಿದ್ದಾರೆ. ಹೀಗೆ ತ್ರಿವಿಧ ದಾಸೋಹ ಕುರಿತು ಅನೇಕ ವಚನಕಾರರು ಪ್ರಸ್ತಾಪಿಸಿದ್ದಾರೆ.

ತ್ರಿವಿಧ ದಾಸೋಹದ ಜತೆಗೆ ಶರಣರು ತ್ರಿಕಾಲ ದಾಸೋಹವನ್ನು ಮಾಡಿದರು. ಬೆಳಿಗ್ಗೆ-ಮಧ್ಯಾಹ್ನ-ರಾತ್ರಿ ಇವು ಒಂದು ದಿನದ ಮೂರು ಹಂತಗಳು. ಈ ಮೂರು ಹಂತಗಳಲ್ಲಿಯೂ ದಾಸೋಹ ನಿರಂತರವಾಗಿ ನಡೆಯುತಿತ್ತು. ಇದು ಶರಣರು ದಾಸೋಹಕ್ಕೆ ನೀಡಿದ ಪ್ರಾಮುಖ್ಯತೆ. ದಾನವನ್ನು ಮಾಡುವವರು ಯಾವಾಗಲೋ ಒಮ್ಮೆ ಮಾಡುತ್ತಾರೆ. ದಾಸೋಹ ಹಾಗಲ್ಲ, ಅದು ನಿತ್ಯ ನಿರಂತರ, ದಿನದ ಮೂರು ಹೊತ್ತು ದಾಸೋಹ ನಡೆಯಬೇಕೆಂಬುದು ಶರಣರ ಸಂಕಲ್ಪವಾಗಿತ್ತು. ಅವರು ಹಾಗೆ ದಾಸೋಹ ಮಾಡಿದರು, ನುಡಿದಂತೆ ನಡೆದರು.

ಸದ್ಭಾವ-ಸದಾಚಾರದ ದಾಸೋಹ.

ದಾಸೋಹದಲ್ಲಿ ಸಮರ್ಪಣಾ ಭಾವವಿರುವಂತೆ ಸದ್ಭಾವ-ಸದಾಚಾರವಿರಬೇಕೆಂದು ಶರಣರು ಹೇಳಿದ್ದಾರೆ. ಯಾರದೋ ಸಂಪತ್ತನ್ನು ತಂದು ದಾಸೋಹ ಮಾಡುವಂತಿಲ್ಲ. ದಾಸೋಹಕ್ಕೆ ಧನವನರ್ಪಿಸಿದರೆ, ಅದು ಸತ್ಯಶುದ್ಧ ಕಾಯಕದಿಂದ ಬಂದುದಾಗಿರಬೇಕು. ತನು-ಮನ ಬಳಲಿಸಿ, ಶ್ರಮಪಟ್ಟು ಗಳಿಸಿದ ಧನಮಾತ್ರ ದಾಸೋಹಕ್ಕೆ ಸಲ್ಲುತ್ತದೆ, ಪರಧನ ಚೋರಕ, ಪಾಪಿಗಳ ಹಣ ಸಲ್ಲದೆನ್ನುತ್ತಾರೆ. ತನುಮನ ಬಳಲದೆ ಉದ್ದಂಡ ವೃತ್ತಿಯಲ್ಲಿ ಧನವಗಳಿಸಿ ತಂದು

ಗುರುಲಿಂಗಜಂಗಮಕ್ಕೆವೆಚ್ಚಿಸಿ, ದಾಸೋಹವ ಮಾಡಿ

ಭಕ್ತರಾದೆವೆಂಬವರನೆನಗೆ ತೋರದಿರಯ್ಯಾ...

-ಚೆನ್ನಬಸವಣ್ಣ

ದಾಸೋಹವೆಂಬುದು ಒಂದು ಸಮಾಜಸೇವೆಯೆಂದು ಆಯ್ದಕ್ಕಿ ಲಕ್ಕಮ್ಮ ಹೇಳಿದ್ದಾರೆ. ಇಂತಹ ದಾಸೋಹದಲ್ಲಿ ಸಿಗುವ ಆನಂದ ಕೈಲಾಸದಲ್ಲಿ ಸಿಗದೆಂದು ಈ ಶರಣೆ ತಿಳಿಸಿದ್ದಾರೆ. ಬಸವಣ್ಣನವರು ಭಕ್ತರಿಗೆ ಸದ್ಭಾವ-ಸದಾಚಾರವಿರಬೇಕೆಂದು ಹೇಳಿದರು. ಕಾಯಕ-ದಾಸೋಹದ ಮೂಲಕ ಹೊಸಹಾದಿ ತೋರಿಸಿದರೆಂದು ಅಕ್ಕನಾಗಮ್ಮ ತಮ್ಮ ವಚನವೊಂದರಲ್ಲಿ ಹೇಳಿದ್ದಾರೆ. ದಾಸೋಹದ ದಾರಿ ತೋರಿಸಿದ ಬಸವಣ್ಣನವರನ್ನು ಅನೇಕ ಶರಣರು ಪ್ರಶಂಸಿದ್ದಾರೆ. ಬೇಡಿ ತಂದು ದಾಸೋಹ ಮಾಡುವುದು ಸೂಕ್ತವಲ್ಲವೆಂದು ಆಯ್ದಕ್ಕಿ ಮಾರಯ್ಯ ತಿಳಿಸಿದ್ದಾರೆ. ಬೇಡಿ ತರುವುದು ಭಿಕ್ಷೆಯಾಗುತ್ತದೆ ಇಂತಹ ಭಿಕ್ಷೆಯ ಹಣ ದಾಸೋಹಕ್ಕೆ ಸಲ್ಲದು. ಸದ್ಭಾವ-ಸದಾಚಾರದಿಂದ ದುಡಿದ ಧನ ಮಾತ್ರ ದಾಸೋಹಕ್ಕೆ ಸಲ್ಲುತ್ತದೆಂದವರು ತಿಳಿಸಿದ್ದಾರೆ.

ದಾಸೋಹ ಮಾಡುವುದೇ ಶಿವಾಚಾರವೆಂದು ಮಡಿವಾಳ ಮಾಚಿದೇವರು ತಮ್ಮ ವಚನದಲ್ಲಿ ವಿವರಿಸಿದ್ದಾರೆ. ಸದಾಚಾರ, ಶಿವಾಚಾರ ಇವು ಪಂಚಾಚಾರಗಳಲ್ಲಿ ಮುಖ್ಯವಾದವು. ದಾಸೋಹಕ್ಕೂ-ಪಂಚಾಚಾರಗಳಿಗೂ ಸಂಬಂಧವಿದೆ. ದುರಾಚಾರದಿಂದ, ದುಷ್ಟತನದಿಂದ, ದುರ್ಬುದ್ಧಿಯಿಂದ ಮಾಡುವ ದಾಸೋಹ, ದಾಸೋಹವೇ ಅಲ್ಲವೆಂದು ಶರಣರು ಸ್ಪಷ್ಟಪಡಿಸಿದ್ದಾರೆ.

ಮಾಡುವ ದಾಸೋಹದಿಂದ ಭಕ್ತಂಗೆ ಅವಗುಣಂಗಳಿಲ್ಲದಿರಬೇಕು

ಕೋಪದ ಕೆಚ್ಚಂ ಕಡಿದು, ಲೋಭಲಂಪಟಮಂ ಕೆದರಿ

ಮೋಹದ ಮುಳ್ಳುಮೊನೆಯ ತೆಗೆದು, ಮದದಚ್ಚಂ ಮುರಿದು,

ಮಚ್ಚರಿಪ ಸರ್ಪನಂ ಸಮತೆಯೆಂಬ ಗಾರುಡದಲಿ ಗಾರುಡಿಸಿ,

ಕರಣಾದಿ ಗುಣಂಗಳಿಚ್ಛೆಗೆ ಹರಿಯಲೀಯದೆ

ವಿಶ್ರಮಿಸಿಪ್ಪ ಭಕ್ತನ ಕಾಯವೆ ಕೈಲಾಸ.....

– ಸೊಡ್ಡಳ ಬಾಚರಸ (ಸ.ವ.ಸಂ.9, ವ:807)

ಈ ವಚನದಲ್ಲಿ ಸೊಡ್ಡಳ ಬಾಚರಸರು ಕಾಯಕ ಮತ್ತು ದಾಸೋಹದಂತಹ ಮೌಲ್ಯಗಳ ಬಗೆಗೆ ಗಂಭೀರ ಚಿಂತನೆ ಮಾಡಿದ್ದಾರೆ. ಅವಗುಣಗಳಿಂದ ಮಾಡುವ ದಾಸೋಹವು ದಾಸೋಹವಾಗುವುದಿಲ್ಲ. ಭಕ್ತರಲ್ಲಿ ಸದ್ಭಾವ-ಸದಾಚಾರವಿರಬೇಕು. ಲೋಭ-ಮೋಹ-ಮದ-ಮತ್ಸರಗಳನ್ನಳಿದ ಭಕ್ತನಿಗೆ ಮಾತ್ರ ದಾಸೋಹ ಮಾಡಲು ಸಾಧ್ಯ. ಕರಣತ್ರಯಗಳ ಮಲತ್ರಯಗಳಿಚ್ಚೆಗೆ ಒಳಗಾಗದೆ, ಸದಾಚಾರದಿಂದ ಸಮರ್ಪಣಾ ಭಾವದಿಂದ ದಾಸೋಹ ಮಾಡಬೇಕು.

ಉರಿಲಿಂಗದೇವರು ದಾಸೋಹದ ಬಗೆಗೆ ಪ್ರಸ್ತಾಪಿಸುತ್ತ ತಮ್ಮ ವಚನವೊಂದರಲ್ಲಿ ಆತ್ಮವಿಮರ್ಶೆ ಮಾಡಿಕೊಂಡಿದ್ದಾರೆ. ಅರಿದೊಡೆ ಶರಣ, ಮರೆದೊಡೆ ಮಾನವ ಎಂದು ಹೇಳಿರುವ ಅವರು, ಹೊತ್ತಿಗೊಂದು ಸಲ ಗೋಸುಂಬೆಯಂತೆ ಬಣ್ಣ ಬದಲಿಸಬಾರದೆಂದು ಹೇಳಿದ್ದಾರೆ. ಶರಣರ ಕಂಡು ಉದಾಸೀನವ ಮಾಡಬಾರದೆಂದು ತಿಳಿಸಿರುವ ಅವರು "ದಾಸೋಹವರಿಯದ ದೂಷಕನು ನಾನಯ್ಯ" ಎಂದು ಆತ್ಮಶೋಧನೆ ಮಾಡಿಕೊಂಡಿದ್ದಾರೆ.

ಸ್ನಾನ ಮಡಕೆಯನಿಳುಹಿ ಬೋನವನುಂಡು
ಮಡಕೆಯನೇರಿಸಲರಿಯದಂತೆ
ನಾನು ಷಟ್ಸ್ಥಲವನೋದಿ ಏನು ಮಾಡುವೆನಯ್ಯಾ
ಅವಗುಣಂಗಳೆನ್ನ ಬೆನ್ನ ಬಿಡದನ್ನಕ್ಕರ?
ಕಾರ್ಯವುಳ್ಳ ಕರ್ತ ಜಂಗಮಲಿಂಗದಲ್ಲಿ
ನಾನು ದಾಸೋಹವ ಮಾಡಲರಿಯದೆ ಕೆಟ್ಟೆನು,
ಕೂಡಲಸಂಗಮದೇವಾ.
-ಬಸವಣ್ಣ

ಅಲ್ಲಮಪ್ರಭು "ತ್ರಿವಿಧ ದಾಸೋಹಿ ಬಸವಣ್ಣನೊಬ್ಬನೇ" ಎಂದು ಕೊಂಡಾಡಿದ್ದರೆ, ಬಸವಣ್ಣನವರು ಈ ವಚನದಲ್ಲಿ ಆತ್ಮಶೋಧನೆ ಮಾಡಿಕೊಂಡಿದ್ದಾರೆ. ಇದು ಅವರ ಆತ್ಮಶೋಧನೆ ಮಾತ್ರ ಆಗಿರದೆ ಎಲ್ಲರ ಆತ್ಮಶೋಧನೆಯೂ ಆಗಬೇಕಾಗಿದೆ. ಮನಸ್ಸಿನಲ್ಲಿ ಅವಗುಣಂಗಳನ್ನು ಇಟ್ಟುಕೊಂಡು ಷಟ್ಸ್ಥಲಗಳನ್ನೋದಿದರೇನು ಪ್ರಯೋಜನವೆಂದು ಬಸವಣ್ಣನವರು ಪ್ರಶ್ನಿಸಿದ್ದಾರೆ. "ನಾನು ದಾಸೋಹವ ಮಾಡಲರಿಯದೆ ಕೆಟ್ಟೆನು" ಎಂದು ಬಸವಣ್ಣನವರೇ ಹೇಳಿದ್ದಾರೆ. ಅಂದರೆ ದಾಸೋಹಕಾರ್ಯ, ದಾನದಷ್ಟು ಸುಲಭವಲ್ಲವೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ಉಳ್ಳವರು, ಇಲ್ಲದವರಿಗೆ ದಾನ ಮಾಡುವುದು ಸುಲಭ. ಆದರೆ ದಾಸೋಹ ಮಾಡುವದು ಅಷ್ಟು ಸುಲಭವಾಗಿಲ್ಲ. ದಾಸೋಹ ಮಾಡುವವರು ಸದ್ಭಕ್ತರಾಗಿರಬೇಕು. ಸದಾಚಾರಿಗಳಾಗಿರಬೇಕು, ಅವಗುಣಂಗಳ ತೊರೆದವರಾಗಿರಬೇಕು. ಕಾಮ-ಕ್ರೋಧ-ಲೋಭ-ಮೋಹ-ಮದ-ಮತ್ಸರಗಳನ್ನು ಬಿಟ್ಟ ಸದಾಚಾರಿಗಳಾಗಿರಬೇಕು. ಆಗ ಮಾತ್ರ ಅದು ದಾಸೋಹವಾಗುತ್ತದೆ.

**ಅಹಂಕಾರ ನಿರಸನ**

ದಾಸೋಹಕ್ಕೂ ಅಹಂಕಾರ ನಿರಸನಕ್ಕೂ ಸಂಬಂಧವಿದೆ. ದಾನಕ್ಕೂ-ದಾಸೋಹಕ್ಕೂ ಇರುವ ವ್ಯತ್ಯಾಸ ಇದೇ. ದಾನಿಗಳಲ್ಲಿ ತಾನು ಕೊಟ್ಟದ್ದು ಎಂಬ ಅಹಂಭಾವವಿರುತ್ತದೆ. ಆದರೆ ದಾಸೋಹದಲ್ಲಿ ಹಾಗಲ್ಲ; ಅಹಂಭಾವ ಕಳೆದುಕೊಂಡಾಗಲೇ ಅವನು ದಾಸೋಹ ಮಾಡಲು ಅರ್ಹನಾಗುತ್ತಾನೆ. ನಾನು

ಗಳಿಸಿದ್ದು, ನನ್ನ ಸಂಪತ್ತು ಎಂಬ ಅಹಂಕಾರ ನಿರಸನಗೊಳ್ಳಬೇಕಾದರೆ ದಾಸೋಹ ಕಡ್ಡಾಯವೆನ್ನುತ್ತಾರೆ ಶರಣರು.

ಮನುಷ್ಯನಿಗೆ ಬರುವ ಅಷ್ಟಮದಗಳನ್ನು ಕುರಿತು ಶರಣರು ವಿವರವಾಗಿ ಹೇಳಿದ್ದಾರೆ. ಯೌವನದ ಮದದಷ್ಟೇ ಹಣದ ಮದ ಅಪಾಯಕಾರಿ. ಅಹಂಕಾರ ಅಥವಾ ಮದ ಅಳಿಯಬೇಕಾದರೆ ದಾಸೋಹ ಮಾಡಬೇಕೆಂದು ಶರಣರು ಹೇಳಿದ್ದಾರೆ.

ದಾನದ ಪರಂಪರೆ ಬಹುದೊಡ್ಡದು, ಹಿಂದಿನಿಂದಲೂ ಈ ದೇಶದಲ್ಲಿ ದಾನಪದ್ಧತಿ ಬೆಳೆದುಕೊಂಡು ಬಂದಿದೆ. ದಾನಧರ್ಮ ಮಾಡಬೇಕೆಂದು ಅನೇಕ ಧರ್ಮಗಳಲ್ಲಿ ಹೇಳಲಾಗಿದೆ. ಆದರೆ ದಾನವು ಅಹಂಕಾರಕ್ಕೆಡೆಮಾಡಿಕೊಡುವುದನ್ನು; ದಾನ ಪಡೆಯುವವನಲ್ಲಿ ಕೀಳರಿಮೆ ಉಂಟಾಗುವುದನ್ನು ಗಮನಿಸಿದ ಶರಣರು ದಾನಕ್ಕೆ ಬದಲಾಗಿ ದಾಸೋಹ ಸಂಸ್ಕೃತಿಯನ್ನು ಬೆಳೆಸಿದರು. ಇದು ಅಹಂಕಾರ ನಿರಸನ ಸಿದ್ಧಾಂತವಾಗಿದೆ.

ದೇಹ ನಿರ್ದೇಹವೆಂದೆನುತ್ತಿಪ್ಪರಯ್ಯಾ
ದೇಹ ನಿರ್ದೇಹ(ದ) ಮರ್ಮವನರಿಯರು
ಅಹಮ್ಮೆಂಬುದೆ ದೇಹ ನೋಡಾ,
ದಾಸೋಹವೆಂಬುದೆ ನಿರ್ದೇಹನೋಡಾ
ಅಹಂಭಾವವಳಿದುಳಿದು ದಾಸೋಹಿಯಾದ
ಕೂಡಲಚೆನ್ನಸಂಗಾ ನಿಮ್ಮ ಶರಣ...
– ಚೆನ್ನಬಸವಣ್ಣ

ಇಲ್ಲಿ ಚೆನ್ನಬಸವಣ್ಣನವರು, ದೇಹ-ನಿರ್ದೇಹದ ಪರಿಕಲ್ಪನೆಯನ್ನು ಹೊಸ ರೀತಿ ಕಟ್ಟಿಕೊಟ್ಟಿದ್ದಾರೆ. ಅಹಂಕಾರ ನಿರಸನ ಮಾಡಿಕೊಳ್ಳುವುದೇ ನಿರ್ದೇಹ, ಇಂತಹ ನಿರ್ದೇಹ ದಾಸೋಹದಿಂದ ಸಾಧ್ಯವಾಗುತ್ತದೆ. ಅಹಂಭಾವ ಅಳಿದಾಗಲೇ ದಾಸೋಹಿಯಾಗಲು ಸಾಧ್ಯ.

## ಉಪಸಂಹಾರ

ಅನ್ನವು ಹಸಿದ ಹೊಟ್ಟೆಯನ್ನು ತುಂಬಿಸಿದರೆ, ಜ್ಞಾನವು, ಅರಿವಿನ ಹಸಿವನ್ನು ಹಿಂಗಿಸುತ್ತದೆ. ಅಂತೆಯೇ ಶರಣರು ಅನ್ನದಾಸೋಹ ಮತ್ತು ಜ್ಞಾನದಾಸೋಹಕ್ಕೆ ಮಹತ್ವದ ಸ್ಥಾನ ನೀಡಿದ್ದಾರೆ. ಆನೆ, ಕುದುರೆ, ಸಾಮ್ರಾಜ್ಯ, ಸಂಪತ್ತು ಇವೆಲ್ಲಕ್ಕಿಂತ ತಿಳುವಳಿಕೆ ಮಾತು, ಶರಣರ ಸೂಳ್ನುಡಿ ಬಹಳ ಮುಖ್ಯವೆಂದು ಅವರು ನಂಬಿದ್ದರು. ಆ ಕಾರಣಕ್ಕೆ ಜ್ಞಾನಕ್ಕೆ-ಅನುಭಾವಕ್ಕೆ ಸೂಳ್ನುಡಿಗಳಿಗೆ ಅವರು ಪ್ರಾಮುಖ್ಯತೆ ನೀಡಿದ್ದಾರೆ. ಶರಣರ ದಾಸೋಹತತ್ವಕ್ಕೆ ಅನೇಕ ಆಯಾಮಗಳಿವೆ. ಕಾಯಕತತ್ವ ದಾಸೋಹತತ್ವದಿಂದ ಸಾಮಾಜಿಕ ಸಮಾನತೆಯನ್ನು ತರಲು ಮಾಡಿದ ಅವರ ಪ್ರಯತ್ನಗಳು ಗಮನಾರ್ಹವಾಗಿವೆ.

## ಪರಾಮರ್ಶನ ಗ್ರಂಥಗಳು:


- ಸಮಗ್ರ ವಚನ ಸಂಪುಟ, ಎಂ.ಎಂ. ಕಲಬುರ್ಗಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
- ಎಂ. ಚಿದಾನಂದಮೂರ್ತಿ, ವಚನ ಸಾಹಿತ್ಯ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೨೦೦೦ (ದ್ವಿ.ಮು).
- ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ (ಸಂ.ಜಿ.ಎಸ್.ಶಿವರುದ್ರಪ್ಪ) ಸಂ.3, ಪ್ರಸಾರಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೭೬.
- ಸಿ.ನಾಗಭೂಷಣ, ಸಕಲೇಶ ಮಾದರಸ, ಶರಣ ಪರಂಪರೆಯ ಪುಸ್ತಕ ಮಾಲೆ, ಬಸವ ಸಮಿತಿ, ಬೆಂಗಳೂರು – ೨೦೦೬.
- ಶರಣ ಸಾಹಿತ್ಯ - ಸಂಸ್ಕೃತಿ ಕೆಲವು ಅಧ್ಯಯನಗಳು, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು – ೨೦೦೦.
- ಎಸ್.ಎಂ.ಹಿರೇಮಠ, ವಚನಕಾರರ ಕಾವ್ಯ ಮೀಮಾಂಸೆ, ಅಶ್ವಿನಿ ಪ್ರಕಾಶನ, ಕಲಬುರ್ಗಿ, ೧೯೯೯.